# <u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ</u>
# <u>ಅಫಜಲಪೂರ</u>

ಸಿಸಿ ನಂ. 179/2019

ಚಾಸಾ-06 ಪ್ರಾಸಾ-05

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ ಹೇಳಿಕೆ
ಪಡೆದುಕೊಳ್ಳಲಾಯಿತು.
ದಿನಾಂಕ: 20-02-2026

| | |
|---|---|
| ಹೆಸರು | : ವಿಠಲರಾವ |
| ತಂದೆಯ ಹೆಸರು | : ಮಹಾದೇವ |
| ವಯಸ್ಸು | : 46 ವರ್ಷ |
| ಉದ್ಯೋಗ | : ಅಬಕಾರಿ ನಿರೀಕ್ಷಕರು, ಭವಾನಿ ನಗರ, ತನಿಖಾ ಠಾಣೆ |
| ವಾಸಸ್ಥಳ | : ಔರಾದ |

<u>ಮುಖ್ಯ ವಿಚಾರಣೆ ಃ- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ</u> :-

ದಿಃ 09-11-2016 ರಿಂದ 14-06-2021 ರವರೆಗೆ ಕಲಬುರ್ಗಿ ಉಪ ವಿಭಾಗದ ಅಬಕಾರಿ ಉಪ ಅಧೀಕ್ಷಕರ ಕಚೇರಿಯಲ್ಲಿ ಅಬಕಾರಿ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 26-12-2018 ರಂದು ಪ್ರಕರಣದ ಕಡತವನ್ನು ಚಾಸಾ 1 ರವರಿಂದ ಪಡೆದುಕೊಂಡು ಅದೇ ದಿನ ಧಾಬಾದ ಮಾಲೀಕತ್ವ ಕುರಿತು ಪುರಸಭೆ ಅಫಜಲಪುರ ರವರಿಗೆ ಪತ್ರ ಬರೆದಿದ್ದು, ದಿಃ 30-01-2019 ರಂದು ಮುಖ್ಯ ಅಧಿಕಾರಿಗಳಿಂದ ಮಾಲೀಕತ್ವ ಕುರಿತು ವರದಿ ಸ್ವೀಕರಿಸಿದ್ಧು, ನಂತರ ಎಲ್ಲಾ ದಾಖಲಾತಿಗಳನ್ನು ಪರಿಶೀಲನೆ ಮಾಡಿ ದಿಃ 23-07-2019 ರಂದು ಆರೋಪಿ ವಿರುದ್ಧ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿರುತೇನೆ.

ಪುರಸಭೆ ಮುಖ್ಯಅಧಿಕಾರಿಗಳಿಗೆ ನೀಡಿದ ಕೋರಿಕೆ ಪತ್ರವನ್ನು ಸಾಕ್ಷಿಗೆ ತೋರಿಸಿದ್ದು ಸಾಕ್ಷಿಯು ಅದರಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು, ಅದನ್ನು ಈಗ ನಿಪಿ**-7** ಮತ್ತು ಸಾಕ್ಷಿ ಸಹಿಯನ್ನು ನಿಪಿ**-7(**ಎ**)** ಎಂದು ಗುರುತಿಸಲಾಯಿತು.

ಪುರಸಭೆ ಮುಖ್ಯಅಧಿಕಾರಿಗಳು ನೀಡಿದ ವರದಿಯನ್ನು ಸಾಕ್ಷಿಗೆ ತೋರಿಸಿದ್ದು ಸಾಕ್ಷಿಯು ಅದರಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು, ಅದನ್ನು ಈಗ ನಿಪಿ-**8** ಎಂದು ಗುರುತಿಸಲಾಯಿತು.

ಸಾಕ್ಷಿಗೆ ತೆರೆದ ನ್ಯಾಯಾಲಯದಲ್ಲಿ 2 ನಾಕೌಟ 650 ML ಬಾಟಲಿಗಳು ಮತ್ತು Kingfisher Strong 650 ML ನ 2 ಬಾಟಲಿಗಳನ್ನು ತೋರಿಸಿದ್ದು ಸಾಕ್ಷಿ ಅವುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ಈಗಾಗಲೇ ಮು.ಮಾ**. 1** ರಿಂದ **4** ಎಂದು ಗುರುತಿಸಲಾಗಿದೆ.

ನ್ಯಾಯಾಲಯದ ಮುಂದೆ ಇರುವ ಆರೋಪಿಗೆ ನೋಡಿ ಸಾಕ್ಷಿ ಗುರುತಿಸುತ್ತಾರೆ.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ **SJG** ವಕೀಲರ ಪರವಾಗಿ **RMS** ವಕೀಲರಿಂದಃ**-**</u>

ಗುನ್ಹೆಸ್ಥಳಕ್ಕೆ ನಾನು ಖುದ್ದಾಗಿ ಭೇಟಿ ನೀಡಿರುತ್ತೇನೆ. ನಾನು ಭೇಟಿ ನೀಡಿದ ದಿನಾಂಕ ನನಗೆ ನಿಖರವಾಗಿ ಹೇಳಲು ಬರುವುದಿಲ್ಲ. ಧಾಬಾದಲ್ಲಿ ಎಷ್ಟು ಕೋಣೆಗಳು ಇವೆ ಎಂದು ನನಗೆ ಹೇಳಲು ಬರುವುದಿಲ್ಲ. ಧಾಬಾದ ಸುತ್ತಮುತ್ತ ಯಾವುದೇ ಅಂಗಡಿಗಳು ಇರುವುದಿಲ್ಲ. ಆರೋಪಿಯಿಂದ ಮತ್ತು ಪಂಚ ಸಾಕ್ಷಿಗಳ ತನಿಖಾ ಕಾಲಕ್ಕೆ ಯಾವುದೇ ಹೇಳಿಕೆ ಪಡೆದಿಲ್ಲ. ಪಂಚರ ಹೆಸರು ಸಿದ್ದು ಮತುತ ಜಗನ್ನಾಥ ಇರುತ್ತದೆ. ಮು.ಮಾ. 1 ರಿಂದ 4 ರಂತೆ ಬಾಟಲಿಗಳು ಬೇರೆ ಮದ್ಯದ ಅಂಗಡಿಯಲ್ಲಿ ಸಿಗುತ್ತವೆ ಎಂದರೆ ಸರಿ. ಮು.ಮಾ. 1 ರಿಂದ 4 ರ ಮೇಲೆ ಇರುವ ತಯಾರಿಕಾ ಸಂಖ್ಯೆ ಹೇಳಲು ಬರುವುದಿಲ್ಲ.

ಧಾಬಾದ ಮಾಲೀಕತ್ವ ಕುರಿತು ಪುರಸಭೆ ಅಫಜಲಪುರ ರವರಿಗೆ ಪತ್ರ ಬರೆದಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸರಿಯಾದ ತನಿಖೆ ಮಾಡದೇ ಆರೋಪಿ ವಿರುದ್ದ ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ **- ಇಲ್ಲ.**</u>

**(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು**)**

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ